ಸೇರಿ ಬಯ್ಯುಸುತ್ತೀರಿ. ನೀವ್ಯಾರಾದರೂ ಅವರ ವರದಿಯನ್ನು ಓದಿದ್ದೀರಾ? ಯಾರಾದರೂ ಓದಿದ್ದರೆ ಹೇಳಿ. ಪ್ರತಿಯೊಂದಕ್ಕೂ ನೀವು ಓದದೇನೆ ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಅಲ್ಲಿ ಕೊಡುತ್ತಿದ್ದೇವೆ. ಇಲ್ಲಿ ಕೊಡುತ್ತಿದ್ದೇವೆ ಅಂತ ಹೇಳುತ್ತಿದ್ದಾರೆ. ಯಾರಿಗೂ ಕೊಡಬಾರದು ಅಂತ ಎಲ್ಲಿ ಹೇಳಿದ್ದಾರೆ. ಹೇಳಿ?

ಡಾ : ವೈ. ನಾಗಪ್ಪ : ಮಾನ್ಯ ಎಸ್.ಎಸ್. ಪಾಟೀಲ್ ಹಾಗೂ ಮಾನ್ಯ ಕಾರಜೋಳ ಗೋವಿಂದ ವೆಂಕಟಪ್ಪನವರು ಹೇಳಿದಂತೆ ನಾವು ಪ್ರತಿಯೊಂದು ಪಂಚಾಯಿತಿಯ ಹೆಡ್‌ಕ್ವಾರ್ಟರ್ಸ್‌ಗೆ ಒಂದೊಂದು ಆಸ್ಪತ್ರೆಯನ್ನು ತೆಗೆಯಬೇಕೆಂದು ಪ್ರಪೋಸಲ್ ರೆಡಿ ಮಾಡಿರುತ್ತೇವೆ. ಇದರೊಂದಿಗೆ ಈಗಾಗಲೇ 167 ಮೊಬೈಲ್ ಆಸ್ಪತ್ರೆಗಳು ಇವೆ. ಅಷ್ಟಲ್ಲದೆ ಇನ್ನು 400 ಮೊಬೈಲ್ ಆಸ್ಪತ್ರೆಗಳನ್ನು ತೆಗೆಯಬೇಕೆಂದು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಯಡಿಯೂರಪ್ಪ ಅವರು ಸಲಹೆಯನ್ನು ನೀಡಿದ್ದಾರೆ. ಅದರಂತೆ ಇನ್ನು ಹೊಸದಾಗಿ 400 ಮೊಬೈಲ್ ಆಸ್ಪತ್ರೆಗಳನ್ನು ತೆಗೆಯಲಿಕ್ಕೆ ಪ್ರಪೋಸಲ್ ಅನ್ನು ರೆಡಿ ಮಾಡಿ ಸಬ್ಮಿಟ್ ಮಾಡಿದ್ದೇವೆ. ಮೋಸ್ಟ್‌ಲಿ ಅದು ಸ್ವಲ್ಪ ದಿವಸದಲ್ಲಿ ಆಗಬಹುದು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	;	2639
ಸದಸ್ಯರ ಹೆಸರು	:	ಶ್ರೀ. ರವಿ ಸಿ.ಟಿ.(ಚಿಕ್ಕಮಗಳೂರು)
ವಿಷಯ	:	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ
ಸಚಿವರ ಹೆಸರು ಮತ್ತು ಪದನಾಮ	;	ಡಾ : ವೈ.ನಾಗಪ್ಪ (ಸಮಾಜ ಕಲ್ಯಾಣ ಸಚಿವರು)

ಕ್ರ.ಸಂ.	ಪ್ರಶ್ನೆ
ಅ.	ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ ನೀಡುತ್ತಿರುವ ಯೋಜನೆಗಳೆಷ್ಟು ?

ಉತ್ತರ

ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ ಪಡೆಯಲು 2 ಯೋಜನೆಗಳು ಇರುತ್ತವೆ.

ಕ್ರ.ಸಂ.	ಪ್ರಶ್ನೆ
ಆ.	ಅವು ಯಾವುವು ಆ ಯೋಜನೆಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಅನುಷ್ಠಾನಗೊಂಡಿವೆ ಆ ಯೋಜನೆಗಳಿಗೆ ಎಷ್ಟು ಹಣ ಬಿಡುಗಡೆಯಾಗಿದೆ.

ಉತ್ತರ

ಆಶ್ರಮಶಾಲೆ ಹಾಗೂ ಮೊರಾರ್ಜಿದೇಸಾಯಿ ವಸತಿ ಶಾಲೆಗಳನ್ನು ನಿರ್ವಹಿಸಲಾಗುತ್ತಿದೆ. 2004–05ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ 2 ಆಶ್ರಮಶಾಲೆ ಹಾಗೂ 2 ಮೊರಾರ್ಜಿದೇಸಾಯಿ ವಸತಿಶಾಲೆಗಳಿಗೆ ಒಟ್ಟು ರೂ 65.01 ಲಕ್ಷ ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಇದುವರೆವಿಗೂ ಒಟ್ಟು ರೂ.53.01 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಕ್ರ.ಸಂ.	ಪ್ರಶ್ನೆ
ಇ.	ಸದರಿ ಯೋಜನೆಗಳನ್ನು ಯಾವ ಯಾವ ಇಲಾಖೆಗೆ ವಹಿಸಲಾಗಿದೆ (ವಿವರ ಒದಗಿಸುವುದು)

ಉತ್ತರ

ಆಶ್ರಮ ಶಾಲೆಗಳನ್ನು ಜಿಲ್ಲಾ ಪಂಚಾಯತ್ ಮೂಲಕ ನಿರ್ವಹಿಸಲಾಗುತ್ತಿದ್ದು, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು ನಿಯಂತ್ರಣಾ ಅಧಿಕಾರಿಗಳಾಗಿರುತ್ತಾರೆ. ಹಾಗೂ ಮೊರಾರ್ಜಿದೇಸಾಯಿ ವಸತಿ ಶಾಲೆಯನ್ನು ಕರ್ನಾಟಕ ರಾಜ್ಯ ವಸತಿ ಶಿಕ್ಷಣ ಸಂಸ್ಥೆಗಳ ಮೂಲಕ ಜಿಲ್ಲಾಧಿಕಾರಿಗಳ ನಿಯಂತ್ರಣದಲ್ಲಿ ನಿರ್ವಹಿಸಲಾಗುತ್ತಿದೆ.

ಶ್ರೀ ರವಿ. ಸಿ.ಟಿ. ; ಮಾನ್ಯ ಸಚಿವರು ನೀಡಿರುವ ಉತ್ತರದಲ್ಲಿ 2004–05ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ 2 ಆಶ್ರಮಶಾಲೆ ಹಾಗೂ 2 ಮೊರಾರ್ಜಿದೇಸಾಯಿ ವಸತಿಶಾಲೆಗಳಿಗೆ ಮಾತ್ರ ಸೀಮಿತವಾಗಿದೆ. ಆದರೆ ಇದುವರೆಗೂ ಜಿಲ್ಲೆಯಲ್ಲಿರತಕ್ಕಂತಹ ಒಟ್ಟು ಉಚಿತ ಶಿಕ್ಷಣ ನೀಡುವ ಯೋಜನೆಗಳು ಹಾಗೂ ವಿದ್ಯಾರ್ಥಿನಿಲಯಗಳ ಬಗ್ಗೆ ವಿವರವನ್ನು ಕೊಟ್ಟಿಲ್ಲ. ಆಯವ್ಯಯದಲ್ಲಿ ಈ ಯೋಜನೆಗೆ ಒದಗಿಸಿರುವ ಒಟ್ಟು ರೂ 65.01 ಲಕ್ಷ ರೂಪಾಯಿಗಳಲ್ಲಿ ಕೇವಲ 53.01 ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಉಳಿದ 12.00 ಲಕ್ಷ ರೂಪಾಯಿ ಹಣವನ್ನು ಯಾವಾಗ ಬಿಡುಗಡೆ ಮಾಡುತ್ತಾರೆ ಹೇಳಬೇಕು.

ಡಾ : ವೈ.ನಾಗಪ್ಪ : ಮಾನ್ಯ ಸದಸ್ಯರು ಕೇಳಿರುವಂತಹ ಮೂರು ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಒದಗಿಸಲಾಗಿದೆ. ಅನುದಾನದ ಹಣ ಒಟ್ಟು 65.01 ಲಕ್ಷ ರೂಪಾಯಿಗಳಲ್ಲಿ ಒಟ್ಟು 53.01 ಲಕ್ಷ ಹಣವನ್ನು ಬಿಡುಗಡೆ ಮಾಡಿದ್ದೇವೆ. ಇನ್ನುಳಿದ 12.00 ಲಕ್ಷ ರೂಪಾಯಿಗಳನ್ನು ಈ ಮಾರ್ಚಿ ಒಳಗೆ ಬಹುಶಃ ಬಿಡುಗಡೆ ಮಾಡಲಾಗುವುದು.

ಶ್ರೀ ರವಿ. ಸಿ.ಟಿ : 2004–05ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯ 2 ಆಶ್ರಮಶಾಲೆ ಹಾಗೂ 2 ಮೊರಾರ್ಜಿದೇಸಾಯಿ ವಸತಿಶಾಲೆಗಳ ಬಗ್ಗೆ ಮಾತ್ರ ಹೇಳಿದ್ದೀರಿ. ಜಿಲ್ಲೆಯಲ್ಲಿರುವಂತಹದು ಈ ನಾಲ್ಕು ಮಾತ್ರವೇ?

ಡಾ: ವೈ.ನಾಗಪ್ಪ : ನೋಡಿ ಪ್ರಶ್ನೆ ಹೀಗಿದೆ. ನೀವು ಪ್ರಶ್ನೆ ಕೇಳಿರುವ ಪ್ರಕಾರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣ ನೀಡುತ್ತಿರುವ ಯೋಜನೆಗಳೆಷ್ಟು? ನೀವು ಬರೇ ಚಿಕ್ಕಮಗಳೂರು ಜಿಲ್ಲೆಯಲ್ಲಿ ಎಷ್ಟು ಅನುಷ್ಠಾನಗೊಂಡಿವೆ ಅಂತ ಕೇಳಿದ್ದೀರಿ. ನೀವು ಇಡೀ ಜಿಲ್ಲೆಯ ಬಗ್ಗೆ ವಿವರವನ್ನು ಕೇಳಿಲ್ಲ.

ಶ್ರೀ ರವಿ. ಸಿ.ಟಿ. ನಾನು ಒಟ್ಟಾರೆ ಯೋಜನೆಗಳೆಷ್ಟು ಅಂತ ಪ್ರಶ್ನೆ ಕೇಳಿದ್ದೇನೆ. ನೀವು ಬರೇ 2004–05ನೇ ಸಾಲಿನಲ್ಲಿ ಅನುಷ್ಠಾನಗೊಂಡಿರುವ ಯೋಜನೆಯ ವಿವರವನ್ನು ಮಾತ್ರ ಹೇಳಿದ್ದೀರಿ. ಇಡೀ ಜಿಲ್ಲೆಯ ಯೋಜನೆಗಳ ವಿವರವನ್ನು ಕೇಳಿದ್ದೇನೆ. ತಾವು ದಯಮಾಡಿ ಸರಿಯಾಗಿ ನೋಡಬೇಕು.

ಡಾ: ವೈ. ನಾಗಪ್ಪ : ತಾವು ಇಡೀ ಜಿಲ್ಲೆಯ ಬಗ್ಗೆ ಕೇಳಿಲ್ಲ. ಪ್ರಾಪರ್ ಚಿಕ್ಕಮಗಳೂರು ಬಗ್ಗೆ ಮಾತ್ರ ವಿವರವನ್ನು ಕೇಳಿರುತ್ತೀರಿ.

ಶ್ರೀ ರವಿ. ಸಿ.ಟಿ : ಇಲ್ಲ. ನಾನು ಇಡೀ ಜಿಲ್ಲೆಯ ಬಗ್ಗೆ ಕೇಳಿದ್ದೇನೆ. ಆದರೆ ತಾವು ಉತ್ತರ ಕೊಡಬೇಕಾದರೆ ಕೂಡ ಚಿಕ್ಕಮಗಳೂರು ಜಿಲ್ಲೆಯಲ್ಲಿರುವ 2 ಆಶ್ರಮಶಾಲೆಗಳು ಅಂತ ವಿವರ ನೀಡಿದ್ದೀರಿ.

ಡಾ: ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೆ ಬಹುಶಃ ವ್ಯತ್ಯಾಸ ಆಗಿರಬಹುದು. ಉತ್ತರವನ್ನು ನಾಳೆ ತಮಗೆ ಕಳುಹಿಸಿಕೊಡುತ್ತೇನೆ.

ಶ್ರೀ ಸಿ.ಟಿ. ರವಿ : ಮಾನ್ಯ ಅಧ್ಯಕ್ಷರೆ ನೀವು ಉಚಿತವಾಗಿ ಶಿಕ್ಷಣ ನೀಡತಕ್ಕಂಥ ಬೇರೆ ಬೇರೆ ಯೋಜನೆಗಳು ಇವೆ. ಕಂಪ್ಯೂಟರ್ ಶಿಕ್ಷಣ ಅಂತ ಕೊಡುತ್ತೀರಿ. ಅದಕ್ಕೆ ಕೋಟ್ಯಾಂತರ ರೂಪಾಯಿಗಳ ಹಣ ವಿನಿಯೋಗಿಸುತ್ತೀರಿ. ಈ ಎಲ್ಲಾ ವಿವರಗಳನ್ನು ನಾನು ಅಪೇಕ್ಷೆ ಪಟ್ಟಿದ್ದೆ. ಹಾಗಾಗಿ ನಾಳೆ ನೀವು ಉತ್ತರ ಕೊಡಬೇಕಾದರೆ ಆ ಕಂಪ್ಯೂಟರ್ ಶಿಕ್ಷಣಕ್ಕೆ ಕೊಡತಕ್ಕಂಥ ಹಣ ಎಷ್ಟು? ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ಗಮನಕ್ಕೆ ತರುವುದೇನೆಂದರೆ ಕಂಪ್ಯೂಟರ್ ಶಿಕ್ಷಣದ ಹಣ ಬಿಡುಗಡೆ ಮಾಡಿಸಿಕೊಳ್ಳಬೇಕು ಅಂದರೆ ಮುಂಗಡ 30 ಪರ್ಸೆಂಟ್ ಹಣ ಕೊಟ್ಟರೆ ಮಾತ್ರ ಬಿಡುಗಡೆಯಾಗತಕ್ಕಂಥ ಸ್ಥಿತಿ ಇದೆ. ಮಾನ್ಯ ನಾಗಪ್ಪನವರು ಬಹಳ ಒಳ್ಳೆಯವರಿದ್ದಾರೆ.

ಕುಸ್ತಿ ಪಟುಗಳು ಇದ್ದಾರೆ .ಆದರೆ ಅವರಿಗೆ ಯಾರ ಭಯವೋ ಗೊತ್ತಿಲ್ಲ. ಅವರ ಕಥೆಯನ್ನು ಓದುತ್ತಿರಬೇಕಾದರೆ ಬಹಳ ಒಳ್ಳೆಯ ಕುಸ್ತಿ ಪಟು ಇದ್ದರು. ಬಹಳ ಸಂಭಾವಿತರು. ಆ ಸಂಭಾವಿತನ ನೋಡಿಯೇ ಅವರಿಗೆ ಹೆಣ್ಣು ಕೊಟ್ಟರು ಎನ್ನುವ ಈ ಎಲ್ಲಾ ವಿವರವನ್ನು ನಾನು ಓದಿದ್ದೆ. ಆದರೆ ಈ ಕುಸ್ತಿ ಪಟುವಿಗೆ ಈಗ... ಎದುರಿಸುತ್ತಿರುವವರು ಯಾರು ಅಂತ ಗೊತ್ತಾಗುತ್ತಿಲ್ಲ. ದಯಮಾಡಿ ಆ ಬಗ್ಗೆಯೂ ವಿವರವನ್ನು ಕೊಡಬೇಕು ಅಂತ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಡಾ: ವೈ. ನಾಗಪ್ಪ : ಮಾನ್ಯ ಅಧ್ಯಕ್ಷರೆ. ಅವರು ಕೇಳಿರತಕ್ಕಂಥ ವಿವರಗಳಿಗೆ ಪತ್ರವನ್ನು ವೈಯಕ್ತಿಕವಾಗಿ ಬರೆದು ತಿಳಿಸಿಕೊಡುತ್ತೇನೆ. ಆ ಪತ್ರದಲ್ಲಿ ತಾವು ಕೇಳತಕ್ಕಂಥ ಎಲ್ಲಾ ವಿವರಗಳನ್ನು ಕೊಡುತ್ತೇನೆ.

ಪ್ರಶ್ನೆ ಸಂಖ್ಯೆ : 176 (2641) (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಪ್ರಶ್ನೆ ಸಂಖ್ಯೆ : 177 (2843) (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಚುಕ್ಕೆ ಗುರುತಿನ ಪ್ರಶ್ನೆ ಕ್ರಮ ಸಂಖ್ಯೆ: 2635

ಸದಸ್ಯರ ಹೆಸರು (ಚಾಮರಾಜನಗರ) ; **ಶ್ರೀ ವಾಟಾಳ್ ನಾಗರಾಜ್**

ಉತ್ತರಿಸುವವರು : **ಶ್ರೀ ಪಿ.ಜಿ.ಆರ್. ಸಿಂಧ್ಯ** (ಬೃಹತ್ ಮಧ್ಯಮ ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು)

ಕ್ರ.ಸಂ. ಪ್ರಶ್ನೆ

ಅ. ರಾಜ್ಯಕ್ಕೆ ಹೊರಗಡೆಯಿಂದ ಬಂದಿರುವ ಖಾಸಗಿ ಕಾರ್ಖಾನೆಗಳು ಎಷ್ಟು ?

ಉತ್ತರ

ರಾಜ್ಯಕ್ಕೆ ಹೊರಗಡೆಯಿಂದ ಬಂದ ಉದ್ಯಮಿಗಳಿಗೆ ಸಂಬಂಧಿಸಿದಂತೆ ದಿನಾಂಕ 1–4–2003 ರಿಂದ 28–2–2005ರ ಅವಧಿಯಲ್ಲಿ ರಾಜ್ಯ ಉನ್ನತ ಮಟ್ಟದ ಸಮಿತಿಯಿಂದ ರೂ 32.399.34 ಕೋಟಿ ಬಂಡವಾಳ ಹೂಡಿಕೆಯ 28 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.

ಅದೇ ರೀತಿ ರಾಜ್ಯ ಮಟ್ಟದ ಏಕಗವಾಕ್ಷಿ ಸಮಿತಿಯಿಂದ ರೂ. 2044.23 ಕೋಟಿ ಬಂಡವಾಳ ಹೂಡಿಕೆಯ 84 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ.